**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.**

**<u>ಸಿ.ಸಿ. ನಂ. 494/2019.</u>**

| **<u>ಫಿರ್ಯಾದಿಃ-</u>** | **ವಿರುದ್ಧ** | **<u>ಆರೋಪಿಃ-</u>** |
|---|---|---|
| ಶ್ರೀ ವಿಷ್ಣು ಬಿನ್ ಉಮೇಶ,<br>ವಯಸ್ಸು ಸುಮಾರು 26 ವರ್ಷ,<br>ವಾಸಃ ಚನ್ನಶೆಟ್ಟಿ ಕೊಪ್ಪ ಗ್ರಾಮ,<br>ಆನಂದಪುರ ಹೋಬಳಿ,<br>ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | | ಶ್ರೀ ಅರುಣ್ ಕುಮಾರ್,<br>ವಯಸ್ಕರು,<br>ಆರ್.ಆರ್.ಟಿ. ಶಿರಸ್ತೆದಾರರು,<br>ತಾಲ್ಲೂಕು ಕಛೇರಿ,<br>ಚನ್ನಗಿರಿ, ದಾವಣಗೆರೆ ಜಿಲ್ಲೆ. |

## <u>ಆಪಾದನೆ</u>

ಪಿರ್ಯಾದಾರರಿಗೆ, ಆರೋಪಿಯಾದ ನೀವು ಸಾಗರದ ತಾಲ್ಲೂಕು ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದಾಗಿನಿಂದಲೂ ಪರಿಚಯಸ್ಥರಾಗಿದ್ದು, ಆರೋಪಿನಾದ ನೀವು ನಿಮ್ಮ ಗೃಹಕೃತ್ಯದ ಅಡಚಣೆ ಮತ್ತು ನಿಮ್ಮ ವಿವಾಹದ ಖರ್ಚುಗಳನ್ನು ಭರಿಸಲು ಪಿರ್ಯಾದುದಾರರಿಂದ ಕೈಗಡ ಸಾಲವಾಗಿ ರೂ. 1,00,000/- ಗಳನ್ನು ಕೇಳಿದ್ದು, ಪಿರ್ಯಾದುದಾರರು ದಿನಾಂಕಃ 13.04.2016 ರಂದು ರೂ. 1,00,000/- ಗಳನ್ನು ನೀಡಿರುತ್ತಾರೆ. ಸದರಿ ಸಾಲವನ್ನು ನೀವು ಆರು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತೀರಿ. ಆದರೆ, ನೀವು ನಿಗದಿತ ಅವಧಿಯೊಳಗೆ ಸಾಲವನ್ನು ಪಾವತಿ ಮಾಡಿರುವುದಿಲ್ಲ. ಪಿರ್ಯಾದುದಾರರು ಪದೇ ಪದೇ ಸಾಲವನ್ನು ಪಾವತಿ ಮಾಡುವಂತೆ ಕೇಳಿಕೊಂಡಾಗ ನೀವು ದಿನಾಂಕಃ 14.02.2019 ರಂದು ಪಿರ್ಯಾದುದಾರರನ್ನು ಭೇಟಿ ಮಾಡಿ, ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಾಗರ ಶಾಖೆಯ ಚೆಕ್ ಸಂಖ್ಯೆ. 782288 ರ ಮೇಲೆ ದಿನಾಂಕವನ್ನು ಮತ್ತು ಮೊತ್ತವನ್ನು ನಮೂದಿಸಿ ನೀಡಿರುತ್ತೀರಿ.

ನಂತರ, ಫಿರ್ಯಾದುದಾರರು ತಮ್ಮ ಖಾತೆ ಇರುವ ಕಾರ್ಪೋರೇಷನ್ ಬ್ಯಾಂಕ್, ಸಾಗರ ಶಾಖೆಗೆ ದಿನಾಂಕಃ 26.03.2019 ರಂದು ಹಾಜರುಪಡಿಸಿದಾಗ, ನಾನ್ ಸಿ.ಟಿ.ಎಸ್. ಚೆಕ್ ನಾನ್ ಅಕ್ಸೆಪ್ಟೆನ್ಸ್ ಎಸ್.ಬಿ.ಐ. ಬ್ಯಾಂಕ್ ಎಂಬ ಷರಾದೊಂದಿಗೆ ದಿನಾಂಕಃ 26.03.2019 ರಂದು ವಾಪಾಸ್ಸು ಬಂದಿರುತ್ತದೆ.

ನಿಮ್ಮ ಚೆಕ್ ಚಾಲ್ತಿಯಲ್ಲಿ ಇಲ್ಲ ಎಂಬ ವಿಚಾರ ಪಿರ್ಯಾದುದಾರರಿಗೆ ತಿಳಿದ ನಂತರ, ದಿನಾಂಕಃ 15.04.2019 ರಂದು ವಕೀಲರ ಮೂಲಕ ಸಾಲ ಮರುಪಾವತಿಸುವಂತೆ ನೋಟಿಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟಿಸು ದಿನಾಂಕಃ 23.04.2019 ರಂದು ನಿಮಗೆ ಖುದ್ದಾಗಿ ಜಾರಿಯಾಗಿರುತ್ತದೆ. ಆದರೂ ಸಹ ನೀವು ಸಾಲವನ್ನು ಮರುಪಾವತಿಸದೇ, ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 12.12.2025 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

**(ಚಾಂದಿನಿ ಜಿ.ಯು.)**
**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಾಗರ.**

**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ**
**ಸಾಗರ.**

# ಸಿ.ಸಿ. ನಂ. 494/2019

**ಆರೋಪಿಯ ಹೇಳಿಕೆ**

ಆರೋಪಿಯ ಹೆಸರುಃ  ಶ್ರೀ ಅರುಣ್ ಕುಮಾರ್.

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ. 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದಿಃ 12.12.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

**(ಚಾಂದಿನಿ ಜಿ.ಯು.)**
**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಾಗರ.**